ಬೆಳ್ತಂಗಡಿ ತಾಲ್ಲೂಕಿನಲ್ಲಿ ವೈದ್ಯಾಪ್ಯ ವೇತನ ನೀಡುವಲ್ಲಿ ಆಗಿರುವ ವಿಳಂಬದ ಬಗ್ಗೆ

೫೪೦. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ವೈದ್ಯಾಪ್ಯ ವೇತನ, ಅಂಗವಿಕಲರ ವೇತನ ಹಾಗೂ ವಿಧವಾ ಮಾಸಾಶನ ಬಟವಾಡೆ ಕಳೆದ ಐದಾರು ತಿಂಗಳಿಂದ ವಿಳಂಬವಾಗಲು ಕಾರಣವೇನು?

ಆ) ಹಾಗಿದ್ದಲ್ಲಿ ಇನ್ನು ಮುಂದೆಯಾದರೂ ಕ್ಲುಪ್ತ ಸಮಯಕ್ಕೆ ಬಟವಾಡೆ ಮಾಡುವ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಅಂಚೆ ಕಚೇರಿಗಳಲ್ಲಿ ಕೆಲಸದ ಒತ್ತಡವು ಹೆಚ್ಚಾಗಿರುವುದರಿಂದ ಕೆಲವೊಬ್ಬರಿಗೆ ತಲುಪಿರಬಹುದು.

ಆ) ರಾಷ್ಟ್ರೀಕೃತ ಬ್ಯಾಂಕುಗಳ ಮುಖಾಂತರ ಫಲಾನುಭವಿಗಳಿಗೆ ವೇತನ ಬಟವಾಡೆ ಮಾಡುವ ಪದ್ಧತಿಯನ್ನು ೧೯೮೫ ಜೂನ್ ಮಾಹೆಯಿಂದ ಜಾರಿಗೆ ತರಲಾಗಿದೆ. ಇದರಿಂದ ಪಿಂಚಣಿದಾರರ ಬ್ಯಾಂಕ್ ಖಾತೆಗೆ ಕ್ಲುಪ್ತ ಕಾಲದಲ್ಲಿ ಜಮೆ ಆಗುತ್ತಲಿದೆ.

ಹೊಸದುರ್ಗ ತಾಲ್ಲೂಕಿನಲ್ಲಿ ಬಗರ ಹುಕ್ಕುಂ ಸಾಗುವಳಿ ಮಾಡಿರುವ ಜಮೀನನ್ನು ಸಕ್ರಮೀಕರಣಗೊಳಿಸುವ ಬಗ್ಗೆ.

೪೭೯. (೧) ಶ್ರೀ ಜಿ. ರಾಮದಾಸ್ (ಹೊಸದುರ್ಗ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಬಡ ಭೂರಹಿತ ಅರ್ಹ ರೈತರು ಬಗರಹುಕುಂ ಸಾಗುವಳಿ ಮಾಡುತ್ತಿರುವ ಜಮೀನುಗಳನ್ನು ಖಾಯಂ ಮಾಡಲು ಸರಕಾರದವರು ಕ್ರಮ ಕೈಗೊಳ್ಳುವರೆ ?

ಆ) ಹಾಗಾದಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಎಷ್ಟು ಎಕರೆ ಭೂಮಿ ಈ ರೀತಿ ಬಡವರಿಂದ ಬಗರ ಹುಕ್ಕುಂ ಸಾಗುವಳಿಯಾಗಿದೆ ?

ಇ) ಈ ರೀತಿ ಸಾಗು ಮಾಡಿರುವ ಬಗರ ಹುಕುಂದಾರರಿಂದ ಖಾಯಂಗೊಳಿಸಲು ಸರಕಾರದವರಿಗೇ ನಾದರೂ ಅರ್ಜಿಗಳು ಬಂದಿದೆಯೆ,

ಈ) ಹಾಗಿದ್ದಲ್ಲಿ, ಅರ್ಜಿಗಳನ್ನು ಯಾವಾಗ ವಿಲೇವಾರಿ ಮಾಡಲಾಗುವುದು, ಹೊಸದುರ್ಗ ತಾಲ್ಲೂಕಿನ ಇಂತಹ ಅರ್ಜಿದಾರರಲ್ಲಿ ಹಿಂದುಳಿದ ಜನಾಂಗದವರ ಸಂಖ್ಯೆ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಸರ್ಕಾರಿ ಆದೇಶ ಸಂಖ್ಯೆ. ಆರ್‌ಡಿ ೧೦೫ ಎಲ್‌ಜಿಪಿ ೭೭, ದಿನಾಂಕ ೧೯-೧೧-೧೯೭೭ ಹಾಗೂ ಆರ್‌ಡಿ ೨೭ ಎಲ್‌ಜಿಪಿ ೮೧ ದಿನಾಂಕ ೨೭-೩-೧೯೮೧ರ ಮೇರೆಗೆ ಬಗರ್ ಹುಕ್ಕುಂ ಸಾಗುವಳಿಯನ್ನು ಕೆಲವು ನಿಬಂಧನೆಗಳಿಗನುಸಾರವಾಗಿ ಖಾಯಂಗೊಳಿಸಲು ಸರ್ಕಾರ ಈಗಾಗಲೇ ಸೂಕ್ತ ಕ್ರಮ ಕೈಗೊಂಡಿರುತ್ತದೆ.

ಆ) ಹೊಸದುರ್ಗ ತಾಲ್ಲೂಕಿನಲ್ಲಿ ಸುಮಾರು ೨೩೦೨--ಎಕರೆ ೨೩ ಗುಂಟೆ ಬಗರ ಹುಕ್ಕುಂ ಸಾಗುವಳಿಯಾಗಿದೆ.

ಇ) ಸರ್ಕಾರಿ ಸುತ್ತೋಲೆ ಸಂಖ್ಯೆ. ಆರ್‌ಡಿ ೪೯ ಎಲ್‌ಜಿಪಿ ೮೨ ದಿನಾಂಕ ೨೯-೬-೧೯೮೨ರ ರೀತಿ ದಿನಾಂಕ ೧೫-೮-೧೯೮೨ರ ನಂತರ ೮೨ಕ್ಕಿಂತ ಅರ್ಜಿಗಳು ಖಾಯಂಗೊಳಿಸಲು ಬಗರ ಹುಕುಂದಾರರಿಂದ ಬಂದಿವೆ.

ಈ) ಬಗರ ಹುಕುಂಸಾಗುವಳಿ ಮಾಡಿರುವ ಜನರಲ್ಲಿ ಅನಿಶ್ಚಿತತೆಯನ್ನು ಹೋಗಲಾಡಿಸಿವ್ಯವಸಾಯದ ಕಸುಬನ್ನು ನಿಶ್ಚಿತ ರೀತಿಯಲ್ಲಿ ಮಾಡಲು ಅನುವಾಗುವಂತೆ ಭೂ ಕಂದಾಯ ಅಧಿನಿಯಮ ಕಲಂ